ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಸೀಮೆಎಣ್ಣೆ ಕೂಪನ್‌ಗಳ ಸಂಖ್ಯೆಯು ಕಡಿತಗೊಳಿಸಿದ್ದರಿಂದ, ಜನಸಾಮಾನ್ಯನಿಗೆ ತೊಂದರೆಯುಂಟಾಗಿರುವುದನ್ನು ಪರಿಹರಿಸಲು ಸರಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಆ) ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಅಡಿಗೆ ಅನಿಲ ಸಂಪರ್ಕ ಹೊಂದಿರುವವರ ಸಂಖ್ಯೆಯು ಹೆಚ್ಚುತಿದ್ದು ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗುತ್ತಿರುವ ಸೀಮೆಎಣ್ಣೆಯ ಪ್ರಮಾಣವು ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಅನಿಲ ಸಂಪರ್ಕ ಸೌಲಭ್ಯ ಹೊಂದಿರುವ ಪಡಿತರ ಚೀಟಿದಾರರ ಸಂಖ್ಯೆ ಹೆಚ್ಚಾಗಿದ್ದು ಅಂತಹವರನ್ನು ಗುರುತಿಸಿ ಅವರಿಗೆ ಸೀಮೆಎಣ್ಣೆಯನ್ನು ನಿಲ್ಲಿಸಬೇಕಾಗಿದೆ. ಜಿಲ್ಲೆಗಳಲ್ಲಿ ಇಂತಹ ಅನಿಲ ಸಂಪರ್ಕ ಹೊಂದಿರುವ ಪಡಿತರ ಚೀಟಿಗಳನ್ನು ಗುರುತಿಸದೆ ಇರುವ ಪ್ರಮಾಣದ ಆಧಾರದ ಮೇಲೆ ಸೀಮೆಎಣ್ಣೆ ಕೂಪನ್‌ಗಳ ಸಂಖ್ಯೆಯನ್ನು ಶೇಕಡ 50ಕ್ಕೆ ಕಡಿತಗೊಳಿಸಲಾಗಿದೆ.

ಇ) ಭಾರತ ಸರ್ಕಾರದ ನೀತಿಯನುಸಾರ ಅಡಿಗೆ ಅನಿಲ ಸಂಪರ್ಕ ಹೊಂದಿರುವ ಪಡಿತರ ಚೀಟಿಗಳಿಗೆ ಸೀಮೆಎಣ್ಣೆ ವಿತರಣೆಯನ್ನು ನಿಲುಗಡೆ ಮಾಡಲಾಗಿದೆ. ಕುಟುಂಬಗಳು ಅನಿಲ ಸಂಪರ್ಕ ಪಡೆಯುವುದನ್ನು ಉತ್ತೇಜಿಸಲು ಪ್ರಯತ್ನಿಸಲಾಗುವುದು.

ಮಲಪ್ರಭಾ ನೀರಾವರಿ ಯೋಜನೆ

3163 (3948) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲಪ್ರಭಾ ನೀರಾವರಿ ಯೋಜನೆಯು ಪ್ರಾರಂಭಿಸಿರುವ ವರ್ಷ ಹಾಗೂ ನೀರಾವರಿಯಾಗಬೇಕಾಗಿರುವ ಭೂ ಕ್ಷೇತ್ರಗಳು ಯಾವುವು; ತಾಲ್ಲೂಕುವಾರು ವಿವರ ನೀಡುವುದು;

ಆ) ಸದರಿ ಯೋಜನೆಗೆ ನೀರು ಪೂರೈಸುತ್ತಿರುವ ಭೂ ಪ್ರದೇಶಗಳು ಯಾವುವು; ವಿವರವಾದ ಮಾಹಿತಿ ನೀಡುವುದು;

ಇ) ಇದುವರೆಗೆ ಕಾಲುವೆಗಳ ನಿರ್ಮಾಣ ಮಾಡಿ ನೀರು ಪೂರೈಸದಿರುವ ಭೂ ಪ್ರದೇಶಗಳು ಯಾವುವು; ನಿರ್ಮಾಣ ಮಾಡಿದ ವರ್ಷಗಳು ಮತ್ತು ಖರ್ಚು ಮಾಡಿರುವ ಹಣದ ಮಾಹಿತಿ ನೀಡುವುದು;

ಈ) ಪೂರ್ಣ ಪ್ರಮಾನ ಮಲಪ್ರಭಾ ಯೋಜನೆಯ ಪ್ರದೇಶ ನೀರಾವರಿಯಾಗಲು ಎಷ್ಟು ವರ್ಷಗಳು ಬೇಕು; ಹಾಗೂ ಯೋಜನೆಯ ವಿವರವೇನು; ಮಹಾದಾಯಿ ನದಿಯ ಜೋಡಣೆಯ ಕಾರ್ಯ ಯಾವ ಹಂತದಲ್ಲಿದೆ: ವಿವರ ನೀಡುವುದು;

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಮಲಪ್ರಭಾ ಯೋಜನೆಯ ನಿರ್ಮಾಣವನ್ನು 1960–61ನೇ ವರ್ಷದಲ್ಲಿ ಪ್ರಾರಂಭ ಮಾಡಲಾಗಿದೆ. ಈ ಯೋಜನೆ ಅಡಿ ಒಟ್ಟು 2,20,028 ಹೆ. ಕ್ಷೇತ್ರಕ್ಕೆ ಒದಗಿಸಲು ಯೋಜಿಸಲಾಗಿದ್ದು, ತಾಲ್ಲೂಕುವಾರು ಅಂತಿಮ ನೀರಾವರಿ ಕ್ಷೇತ್ರದ ವಿವರಣೆ ಈ ಕೆಳಗಿನಂತಿದೆ:

	ಕ್ಷೇತ್ರ (ಹೆ.ಗಳಲ್ಲಿ)
1. ಬೆಳಗಾಂವ ಜಿಲ್ಲೆ	
ಬೈಲಹೊಂಗಲ ತಾಲ್ಲೂಕು	7,396
ರಾಮದುರ್ಗ ತಾಲ್ಲೂಕು	20,853
ಸವದತ್ತಿ ತಾಲ್ಲೂಕು	45,794
ಒಟ್ಟು	**74,043**
2. ಬಾಗಲಕೋಟೆ ಜಿಲ್ಲೆ	
ಬಾದಾಮಿ ತಾಲ್ಲೂಕು	23,979
3. ಧಾರವಾಡ ಜಿಲ್ಲೆ	
ನವಲಗುಂದ ತಾಲ್ಲೂಕು	36,850
ಹುಬ್ಬಳ್ಳಿ ತಾಲ್ಲೂಕು	4,788
ಒಟ್ಟು:	**41,638**
4. ಗದಗ ಜಿಲ್ಲೆ	
ನರಗುಂದ ತಾಲ್ಲೂಕು	37,249
ಗದಗ ತಾಲ್ಲೂಕು	1,570
ರೋಣ ತಾಲ್ಲೂಕು	41,549
ಒಟ್ಟು	**80,368**
ಯೋಜನೆಯ ಒಟ್ಟು :	**2,20,028**

ಆ) ಮೇ. 2003 ರವರೆಗೆ ಒಟ್ಟು 1,91,709 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. **ಈ ಕ್ಷೇತ್ರದ ತಾಲ್ಲೂಕುವಾರು ವಿವರಣೆ ಈ ಕೆಳಗಿನಂತಿದೆ :**

ಜಿಲ್ಲೆ:	ತಾಲ್ಲೂಕು	ಮೇ 2003 ರವರೆಗೆ ಕಲ್ಪಿಸಲಾದ ನೀರಾವರಿ ಕ್ಷೇತ್ರದ ಪ್ರಗತಿ (ಹೆ.ಗಳಲ್ಲಿ)
1. ಬೆಳಗಾಂವ ಜಿಲ್ಲೆ		
	ಬೈಲಹೊಂಗಲ ತಾಲ್ಲೂಕು	6,068
	ರಾಮದುರ್ಗ ತಾಲ್ಲೂಕು	20,853
	ಸವದತ್ತಿ ತಾಲ್ಲೂಕು	45,227
	ಒಟ್ಟು:	72,148
2. ಬಾಗಲಕೋಟೆ ಜಿಲ್ಲೆ		
	ಬಾದಾಮಿ ತಾಲ್ಲೂಕು	18,020
3. ಧಾರವಾಡ ತಾಲ್ಲೂಕು		
	ನವಲಗುಂದ ತಾಲ್ಲೂಕು	
	ಹುಬ್ಬಳ್ಳಿ ತಾಲ್ಲೂಕು	4,936
ಒಟ್ಟು		**40,987**

4. ಗದಗ ಜಿಲ್ಲೆ	
ನರಗುಂದ ತಾಲ್ಲೂಕು	37,249
ಗದಗ ತಾಲ್ಲೂಕು	483
ರೋಣ ತಾಲ್ಲೂಕು	22,822
ಒಟ್ಟು	**60,554**
ಯೋಜನೆಯ ಒಟ್ಟು:	**1,91,709**

ಇ) ಮಲಪ್ರಭಾ ಎಡದಂಡೆ ಕಾಲುವೆಯ ಕಿಮೀ: 131 ರಿಂದ 142 ರವರೆಗೆ ಕೆಲಸಗಳನ್ನು 2001 ರಿಂದ 2003ರ ಅವಧಿಯೊಳಗೆ ಪೂರ್ಣಗೊಳಿಸಿದ್ದು, ಇದರಡಿ ಬರುವ ಬ್ಲಾಕ್ ಸಂಖ್ಯೆ 52 ರಿಂದ 54 ಹಾಗೂ 56ರ ಹೊಲಗಾಲುವೆಯ ನಿರ್ಮಾಣವು ವಿವಿಧ ಪ್ರಗತಿಯಲ್ಲಿರುವುದರಿಂದ ನೀರು ಪೂರೈಸಲು ಸಾಧ್ಯವಾಗಿರುವುದಿಲ್ಲ. ಮೇಲಿನ ಕಾಲುವೆಯ ಕಾಮಗಾರಿಗಳಿಗೆ ರೂ. 42.52 ಕೋಟಿ ವೆಚ್ಚವಾಗಿದೆ.

2. ಮಲಪ್ರಭಾ ಬಲದಂಡೆ ಕಾಲುವೆಯ ಕಿ.ಮೀ. 111 ರಿಂದ 121 ರವರೆಗೆ ಕೆಲಸಗಳನ್ನು ಪೂರ್ಣಗೊಳಿಸಿದ್ದು, ಇದರಡಿ ಬರುವ ಬ್ಲಾಕ್ ಸಂಖ್ಯೆ 52, 53(ಎ) ಹಾಗೂ 53(ಬಿ) ಅಡಿಯ ಹೊಲಗಾಲುವೆ ನಿರ್ಮಾಣವು ವಿವಿಧ ಹಂತದ ಪ್ರಗತಿಯಲ್ಲಿರುವುದರಿಂದ ನೀರು ಪೂರೈಸಲು ಸಾಧ್ಯವಾಗಿರುವುದಿಲ್ಲ. ಮೇಲಿನ ಕಾಲುವೆಯ ಕೆಲಸಗಳನ್ನು 1999 ರಿಂದ 2003ರ ಅವಧಿಯೊಳಗೆ ಪೂರ್ಣಗೊಳಿಸಿದ್ದು, ಒಟ್ಟು ರೂ. 68,25 ಕೋಟಿ ವೆಚ್ಚವಾಗಿದೆ.

ಈ) ಮಲಪ್ರಭಾ ಯೋಜನೆಯನ್ನು 2004ನೇ ವರ್ಷದ ಕೊನೆಯವರೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಎಡದಂಡೆ ಕಾಲುವೆಯ ಒಟ್ಟು ಉದ್ದವು 150 ಕಿಮೀ; ಇದ್ದು ಅದರಲ್ಲಿ ಕಿಮೀ: 144 ರವರೆಗೆ ಪೂರ್ಣಗೊಂಡಿರುವುದು; ಬಲದಂಡೆ ಕಾಲುವೆಯು ಒಟ್ಟು 142 ಕಿ.ಮೀ. ಉದ್ದವಿದ್ದು ಅದರಲ್ಲಿ 121 ಕಿ.ಮೀ.ವರೆಗೆ ಹಾಗೂ 123.124 ಕಿ.ಮೀ. ಕಾಮಗಾರಿಗಳು ಪೂರ್ಣಗೊಂಡಿದ್ದು. ಕಿ.ಮೀ. 122, 125 ರಿಂದ 131 ರವರೆಗೆ ಕಾಮಗಾರಿಗಳು ಪ್ರಗತಿಯಲ್ಲಿವೆ.

ಮಹಾದಾಯಿ ತಿರುವು ಯೋಜನೆಯನ್ನು ಕಾರ್ಯಗತಗೊಳಿಸಲು ಈ ಕೆಳಕಂಡ ಯೋಜನೆಗಳಿಗೆ ಅನುಕ್ರಮವಾಗಿ ರೂ. 44.78 ಕೋಟಿ ಹಾಗೂ ರೂ. 49.20 ಕೋಟಿ ಅಂದಾಜಿಗೆ ದಿ: 22.8.2000 ಎಂದು ಸರ್ಕಾರದ ಅನುಮೋದನೆಯನ್ನು ನೀಡಿದೆ.

1. ಖಾನಾಪೂರ ತಾಲ್ಲೂಕಿನ ಕಣಕುಂಬಿ ಗ್ರಾಮದ ಹತ್ತಿರ ಕಳಸಾನಾಲಾದಿಂದ 3.56 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ವರ್ಗಾಯಿಸುವುದು

2. ಖಾನಾಪೂರ ತಾಲ್ಲುಕಿನ ನೆರ್ಸೆ ಗ್ರಾಮದ ಹತ್ತಿರ ಬಂಡೂರು ನಾಲಾದಿಂದ 4.00 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ವರ್ಗಾಯಿಸುವುದು.

ದಿನಾಂಕ: 22.7.1992 ರಂದು ಪ್ರಥಮ ಬಾರಿಗೆ, ಪಣಜಿಯಲ್ಲಿ ಗೋವಾ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಮಂತ್ರಿಗಳ ನಡುವೆ ಮಹಾದಾಯಿ ಯೋಜನೆಯ ಕುರಿತು ಸಭೆ ಜರುಗಿತು. ಸಭೆಯಲ್ಲಿ ಎರಡೂ ರಾಜ್ಯಗಳ ಅಧಿಕಾರಗಳನ್ನು ಹೊಂದಿರುವ ತಾಂತ್ರಿಕ ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ದಿನಾಂಕ: 27.09.1993 ಮತ್ತು 04.10.96 ರಂದು ಸಭೆಯನ್ನು ನಡೆಸಿದ್ದು ದಿ: 10.9.96 25–4–98

ಹಾಗೂ 10–1–2000 ರಂದು ಗೋವಾ ರಾಜ್ಯದೊಂದಿಗೆ ಮಾತುಕತೆಗಳು ನಡೆದಿರುತ್ತದೆ. ನವದೆಹಲಿಯಲ್ಲಿ ಅಂತರ್ ರಾಜ್ಯ ಸಭೆಗಳು ದಿ: 29–5–2001 ಮತ್ತು 27–3–2002 ಜರುಗಿದ್ದು, ಕರ್ನಾಟಕ ರಾಜ್ಯದ ಮನವಿಗಳಂತೆ ಹಾಗೂ ಕೇಂದ್ರ ಸರ್ಕಾರದದೊಂದಿಗೆ ಜರುಗಿಸಿದ ಪತ್ರ ವ್ಯವಹಾರಗಳಂತೆ ದಿ: 30–4–2002 ರಂದು ಹುಬ್ಬಳ್ಳಿ–ಧಾರವಾಡ ಅವಳಿನಗರಗಳ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಮಹಾದಾಯಿಕೊಳ್ಳದಿಂದ 7.56 ಟಿಎಂಸಿ ನೀರನ್ನು ಮಲಪ್ರಭಾ ನದಿಗೆ ವರ್ಗಾಯಿಸಲು ಕೇಂದ್ರ ಸರ್ಕಾರವು ತಾತ್ವಿಕ ಒಪ್ಪಿಗೆಯನ್ನು ನೀಡಿತ್ತು. ಗೋವಾ ರಾಜ್ಯದ ಒತ್ತಡದ ಕಾರಣ ಸದರಿ ಒಪ್ಪಿಗೆಯನ್ನು ದಿ: 19–9–2002ರಂದು ಕೇಂದ್ರ ಸರ್ಕಾರವು ತಡೆಹಿಡಿದಿರುತ್ತದೆ. ಈ ತಡೆ ಆದೇಶವನ್ನು ತೆರವುಗೊಳಿಸುವ ಕುರಿತು ಸರ್ಕಾರದ ಕಾರ್ಯದರ್ಶಿಗಳು, ಜಲ ಸಮಪನ್ಮೂಲ ಇಲಾಖೆ ಹಾಗೂ ಆಗ್ರಹಪೂರ್ವಕವಾಗಿ ಹಲವಾರು ಪತ್ರಗಳಲ್ಲಿ ಕೋರಿರುತ್ತಾರೆ. ಗೋವಾ ರಾಜ್ಯವು ಮಹಾದಾಯಿ ನದಿ ವಿವಾದ ಮಂಡಳಿಯ ರಚನೆ ಕುರಿತು ಮಾಡಿರುವ ಮನವಿಯ ಬಗ್ಗೆ ಉಭಯ ರಾಜ್ಯಗಳೊಂದಿಗೆ ಚರ್ಚಿಸಿ ಒಂದು ನಿರ್ಧಾರಕ್ಕೆ ಬರಲು ದಿನಾಂಕ: 16.11.02ರಂದು ಸಂಬಂಧಿಸಿದ ಮೂರು ರಾಜ್ಯಗಳಾದ ಮಹಾರಾಷ್ಟ್ರ, ಕರ್ನಾಟಕ ಮತ್ತು ಗೋವಾ ರಾಜ್ಯಗಳ ನಡುವೆ ಒಂದು ಸಭೆಯನ್ನು ಏರ್ಪಡಿಸಿದ್ದು ಕಾರಣಾಂತರಗಳಿಂದ ಸಭೆಯನ್ನು ಮುಂದೂಡಲಾಗಿದ್ದು ನಂತರ ದಿನಾಂಕ: 20.12.02 ರಂದು ಸದರಿ ಸಭೆಯನ್ನು ನವದೆಹಲಿಯಲ್ಲಿ ಜರುಗಿಸಿದ್ದು ಈ ಸಭೆಯಲ್ಲಿ ಮಹಾದಾಯಿ ಕಣಿವೆಯಲ್ಲಿ ದೊರಕುವ ಒಟ್ಟು ನೀರಿನ ಪ್ರಮಾಣದ ಬಗ್ಗೆ ಕೇಂದ್ರ ಜಲ ಆಯೋಗದಿಂದ ಯೀಲ್ಡ್ ಸೀರೀಸ್ ಅಧ್ಯಯನವನ್ನು (Yield series studies) ಮಾರ್ಚ್ 2003 ರೊಳಗೆ ಪೂರ್ಣಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ರಾಜ್ಯ ಸರ್ಕಾರದ ಅಧಿಕಾರಿಗಳು ನವದೆಹಲಿಯ ಕೇಂದ್ರ ಜಲ ಆಯೋಗ ಕಚೇರಿಗೆ ಹೋಗಿ ಸದರಿ ಅಧ್ಯಯನದಲ್ಲಿ ಭಾಗವಹಿಸಿ ಬಂದಿರುತ್ತಾರೆ. ಅಧ್ಯಯನ ಕಾರ್ಯವು ಪೂರ್ಣಗೊಂಡಿದ್ದು ಮುಂದಿನ ನಿರ್ದೇಶನವನ್ನು ಕೇಂದ್ರ ಸರ್ಕಾರದಿಂದ ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರದಿಂದ ತಡೆಹಿಡಿದಿರುವ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ದಿ: 21–4–2003 ರಂದು ಮಾನ್ಯ ಜಲ ಸಂಪನ್ಮೂಲ ಸಚಿವರಿಂದ ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವರಿಗೆ ಪತ್ರ ಬರೆದು ಕೋರಲಾಗಿದೆ.

ಜಲ ಸಂಪನ್ಮೂಲ ಸಚಿವರು ದಿ: 11–7–03 ರಂದು ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವರನ್ನು ಭೆಟ್ಟಿಯಾಗಿ ಮತ್ತೊಂದು ಮನವಿಯನ್ನು ನೀಡಿ. ಕರ್ನಾಟಕ ತನ್ನ ಯೋಜನಾ ಕೆಲಸ ಪ್ರಾರಂಭಿಸಲು ಪರವಾನಿಗೆಗೆ ಒತ್ತಾಯಿಸಲಾಗಿದೆ.

ಕೇಂದ್ರ ಸರ್ಕಾರದ ಮಾನ್ಯ ಜಲ ಸಂಪನ್ಮೂಲ ಸಚಿವು ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಸಭೆ ಕರೆಯುವುದಾಗಿ ತಿಳಿಸಿದ್ದಾರೆ.

ರಾಜ್ಯದಲ್ಲಿಯ ಕೃಷಿ ಫಾರಂಗಳ ವ್ಯಾಪ್ತಿ ಹಾಗೂ ನಿರ್ವಹಣೆ

3164 (3949) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿಯ ಕೃಷಿ ಇಲಾಖೆಗೆ ಒಳಪಟ್ಟಿರುವ ಕೃಷಿ ಫಾರಂಗಳು ಯಾವುವು ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ನೀಡುವುದು: ಫಾರಂಗಳಲ್ಲಿ ರೈತರಿಗಾಗಿ ಯಾವ ಮಾದರಿ ಬೆಳೆ ಬೆಳೆಯಲಾಗುತ್ತಿದೆ: ವಿವರವಾದ ಮಾಹಿತಿ ನೀಡುವುದು.